ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 01–06–2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **Meeting with Stakeholders of Minorities Groups:**<br><br>**Inauguration:**<br><br>**Dr. Qamarul Islam, Minister for Municipalities, Local Bodies, Minorities Welfare and Wakf** | **02-06-2016 Thursday at 10-00 AM** | **Hotel Solitaire, Race Course Road, Bengaluru** |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಜೂನ್ 30 ರೊಳಗೆ ರಾಜ್ಯ ಸರ್ಕಾರಿ ನೌಕರರ ವರ್ಗಾವಣೆ

**ಬೆಂಗಳೂರು, ಜೂನ್ 1 (ಕರ್ನಾಟಕ ವಾರ್ತೆ)**

ರಾಜ್ಯ ಸರ್ಕಾರಿ ನೌಕರರ ವರ್ಗಾವಣೆಯ ಅವಧಿಯನ್ನು ಜೂನ್ 30 ರೊಳಗೆ ಪೂರ್ಣಗೊಳಿಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. 2013 ರಿಂದ 2015 ರ ನಡುವೆ ಹೊರಡಿಸಿರುವ ವಿವಿಧ ಸರ್ಕಾರಿ ಆದೇಶಗಳಲ್ಲಿ ನೀಡಿರುವ ವಿಸ್ತೃತವಾದ ಮಾರ್ಗಸೂಚಿಗಳನ್ವಯ ಷರತ್ತಿಗೊಳ್ಳಪಟ್ಟು 2016–17 ನೇ ಸಾಲಿನ ಸರ್ಕಾರಿ ನೌಕರರ ವರ್ಗಾವಣೆಯನ್ನು ಆದಷ್ಟು ಮಿತಿಗೊಳಿಸಿ ಜೂನ್ 30 ರೊಳಗೆ ಪೂರ್ಣಗೊಳಿಸುವಂತೆ ರಾಜ್ಯ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಡಿಪಿಎಂ;ಬಾಬು::ಜಿಪಿಆರ್

# ಪೊಲೀಸ್ ಮುಷ್ಕರ ನಿಷೇಧ : ಸರ್ಕಾರಿ ಆದೇಶ

**ಬೆಂಗಳೂರು, ಜೂನ್ 1 (ಕರ್ನಾಟಕ ವಾರ್ತೆ)**

ಸರ್ಕಾರದ ಮೇ 31 ರಲ್ಲಿನ ಅಧಿಸೂಚನೆಯಲ್ಲಿ 'ಸಾರ್ವಜನಿಕ ಸುವ್ಯವಸ್ಥೆ' ಮತ್ತು 'ಪೊಲೀಸ್' ಸೇವೆಗೆ ಸೇರಿದ ಎಲ್ಲಾ ಸೇವೆ ಮತ್ತು ಉದ್ಯೋಗ ವರ್ಗಗಳನ್ನು "ಅತ್ಯಾವಶ್ಯಕ ಸೇವೆ" ಎಂದು ಘೋಷಿಸಲಾಗಿದೆ.

ಪೊಲೀಸ್ ಸೇವೆಗೆ ಸೇರಿದ ಸಿಬ್ಬಂದಿಯು ಯಾವುದೇ ವಿದವಾದ ಮುಷ್ಕರ ಹೂಡುವುದರಿಂದ ಸಾರ್ವಜನಿಕ ಸುವ್ಯವಸ್ಥೆ ಮತ್ತು ಸುರಕ್ಷತೆಗೆ ಧಕ್ಕೆ ಉಂಟಾಗಿ ಸಮಾಜದ ಸ್ವಾಸ್ಥ್ಯದ ಮೇಲೆ ತೀವ್ರ ದುಷ್ಪರಿಣಾಮ (ಕಳ್ಳತನ, ಕೊಲೆ, ಅತ್ಯಾಚಾರ, ಸುಲಿಗೆ, ದರೋಡೆ ಇನ್ನೂ ಮುಂತಾದ ಅಪರಾಧಗಳಿಂದ) ಬೀರುವುದರಿಂದ ಸಾರ್ವಜನಿಕ ಸುವ್ಯವಸ್ಥೆ ಮತ್ತು ಸುರಕ್ಷತೆ ದೃಷ್ಟಿಯಿಂದ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ, 2013 (2015 ರ ಕರ್ನಾಟಕ ಅಧಿನಿಯಮ 25) ರ 3ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಪೊಲೀಸ್ ಸೇವೆಗೆ ಸೇರಿದ ಎಲ್ಲಾ ಸಿಬ್ಬಂದಿಯು ಯಾವುದೇ ವಿಧವಾದ ಮುಷ್ಕರ ಹೂಡುವುದನ್ನು ಇಂದಿನಿಂದ ನಿಷೇಧಿಸಿ ರಾಜ್ಯ ಸರ್ಕಾರ ಇಂದು ಆದೇಶ ಹೊರಡಿಸಿದೆ.

;ಬಾಬು::ಜಿಪಿಆರ್

# ಮುಷ್ಕರನಿರತ ಪೊಲೀಸ್ ವಿರುದ್ಧ ಕಾನೂನು ರೀತ್ಯ ಕ್ರಮ

**ಬೆಂಗಳೂರು, ಜೂನ್ 1 (ಕರ್ನಾಟಕ ವಾರ್ತೆ)**

ಸಂವಿಧಾನ ಅನುಸೂಚಿ 7 ರಲ್ಲಿನ 2ನೇ ಪಟ್ಟಿಯಲ್ಲಿರುವ 'ಸಾರ್ವಜನಿಕ ಸುವ್ಯವಸ್ಥೆ' ಮತ್ತು 'ಪೊಲೀಸ್' ಸಂಬಂಧಿಸಿದ ಎಲ್ಲಾ ಸೇವೆಗಳ ಕುರಿತು ರಾಜ್ಯ ಶಾಸನಾಂಗವು ಕಾನೂನು ರೂಪಿಸುವ ಅಧಿಕಾರ ಹೊಂದಿರುತ್ತದೆ.

ಅಪರಾಧ ಪತ್ತೆ ಹಾಗೂ ಸಾರ್ವಜನಿಕ ಸುವ್ಯವಸ್ಥೆಯ ನಿರ್ವಹಣೆಯೊಂದಿಗೆ ನಾಗರೀಕರ ಆಸ್ತಿ ಮತ್ತು ಜೀವವನ್ನು ರಕ್ಷಿಸುವುದು ರಾಜ್ಯ ಪೊಲೀಸ್ ಸಿಬ್ಬಂದಿಯ ಮೂಲ ಅತ್ಯಾವಶ್ಯಕ ಕರ್ತವ್ಯವಾಗಿರುತ್ತದೆ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯು ಕಾರ್ಯನಿರ್ವಹಿಸಲು ನಿರಾಕರಿಸಿದಲ್ಲಿ, ಸಾರ್ವಜನಿಕ ಸುವ್ಯವಸ್ಥೆ ಮತ್ತು ಸುರಕ್ಷತೆಗೆ ದಕ್ಕೆ ಉಂಟಾಗಿ, ಸಮಾಜದ ಸ್ವಾಸ್ಥ್ಯದ ಮೇಲೆ ತೀವ್ರ ದುಷ್ಪರಿಣಾಮ

(ಕಳ್ಳತನ, ಕೊಲೆ, ಅತ್ಯಾಚಾರ, ಸುಲಿಗೆ, ದರೋಡೆ ಇನ್ನೂ ಮುಂತಾದ ಅಪರಾಧಗಳು) ಹೆಚ್ಚಾಗಿ ಸಾರ್ವಜನಿಕರ ಸುಗಮ ಜೀವನವು ಅಸ್ತವ್ಯಸ್ತವಾಗುವುದೆಂದು ಸರ್ಕಾರವು ಅಭಿಪ್ರಾಯಪಡುತ್ತದೆ.

ಆದ್ದರಿಂದ ಸಾರ್ವಜನಿಕ ಸುವ್ಯವಸ್ಥೆ ಮತ್ತು ಸುರಕ್ಷತೆ ದೃಷ್ಟಿಯಿಂದ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣೆ ಆದಿನಿಯಮ, 20 (2015 ರ ಕರ್ನಾಟಕ ಅಧಿನಿಯಮ 25) ರ 2ನೇ ಪ್ರಕರಣದ (1) ನೇಉಪ ಪ್ರಕರಣದ ( a ) ಖಂಡದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯ ಸರ್ಕಾರವು ರಾಜ್ಯ ಪೊಲೀಸ್ ಸೇವೆಗೆ ಸೇರಿದ ಎಲ್ಲಾ ಸೇವೆ ಮತ್ತು ಉದ್ಯೋಗ ವರ್ಗಗಳನ್ನು ಈ ಕಾಯ್ದೆಯ ಉದ್ದೇಶಗಳಿಗಾಗಿ "ಅತ್ಯಾವಶ್ಯಕ ಸೇವೆ" ಎಂದು ಪರಿಗಣಿಸಿ ಕೂಡಲೇ ಜಾರಿಗೆ ಬರುವಂತೆ ಈ ಮೂಲಕ ಘೋಷಿಸಲಾಗಿದೆ ಎಂದು ರಾಜ್ಯ ಸರ್ಕಾರದ ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ) ಮೇ 31 ರಂದು ಅಧಿಸೂಚನೆ ಹೊರಡಿಸಿದೆ.

;ಬಾಬು::ಜಿಪಿಆರ್

## "ಗಾನವೆಂಬ ಗಂಧ ಚೆಲ್ಲಿ'...... ಪುಟ್ಟಣ್ಣ ನೆನಪಿನ ಸಂಗೀತ ಸಂಜೆ

**ಬೆಂಗಳೂರು, ಜೂನ್ 1 (ಕರ್ನಾಟಕ ವಾರ್ತೆ)**

ಕರ್ನಾಟಕ ಚಲನಚಿತ್ರ ಅಕಾಡೆಮಿ ಆಶ್ರಯದಲ್ಲಿ ಜೂನ್ 5 ರ ಭಾನುವಾರ ಸಂಜೆ 5-00 ಗಂಟೆಗೆ ಬೆಂಗಳೂರು ಜೆ. ಸಿ. ರಸ್ತೆಯಲ್ಲಿ ರವೀಂದ್ರ ಕಲಾಕ್ಷೇತ್ರ ಹಿಂಭಾಗದ ಸಂಸ ಬಯಲು ರಂಗಮಂದಿರದಲ್ಲಿ "ಗಾನವೆಂಬ ಗಂಧ ಚೆಲ್ಲಿ'...... "ಪುಟ್ಟಣ್ಣ ಕಣಗಾಲ್ ನೆನಪಿನ ಸಂಗೀತ ಸಂಜೆ" ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ಅಕಾಡೆಮಿ ಕಾರ್ಯದರ್ಶಿ ಹೆಚ್. ಬಿ. ದಿನೇಶ್ ತಿಳಿಸಿದ್ದಾರೆ.

ಸಂಗೀತ ಸಂಜೆ ಸಮಾರಂಭದಲ್ಲಿ ಕನ್ನಡ ಚಲನಚಿತ್ರರಂಗದ ಹಿರಿಯ ನಟ ಹಾಗೂ ರಾಜ್ಯ ವಸತಿ ಸಚಿವ ಡಾ. ಎಂ. ಹೆಚ್. ಅಂಬರೀಶ್, ಚಲನಚಿತ್ರ ನಿರ್ದೇಶಕ ಟಿ. ಎನ್. ಸೀತರಾಮ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಸಾ. ರಾ. ಗೋವಿಂದು, ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷ ಎಂ. ಎಸ್. ರಮೇಶ್, ಖ್ಯಾತ ಹಿನ್ನೆಲೆ ಗಾಯಕಿ ಶ್ರೀಮತಿ ಬಿ. ಆರ್. ಛಾಯಾ ಪಾಲ್ಗೊಳ್ಳುವರು. ಈ ಸಂದರ್ಭದಲ್ಲಿ ಶ್ರೀಮತಿ ನಾಗಲಕ್ಷ್ಮಿ ಪುಟ್ಟಣ್ಣ ಕಣಗಾಲ್ ಅವರಿಗೆ ಗೌರವಾರ್ಪಣೆ ಮಾಡಲಾಗುವುದು. ಶ್ರೀಮತಿ ಅಪರ್ಣ ಹಾಗೂ ಭ್ರಮೆ ತಂಡದಿಂದ ಪುಟ್ಟಣ್ಣ ಕಣಗಾಲ್ ಅವರು ನಿರ್ದೇಶಿಸಿದ ಚಲನಚಿತ್ರ ಗೀತೆಗಳ ಗಾಯನ ಏರ್ಪಡಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಬಾಬು::ಜಿಪಿಆರ್

# ಅರ್ಹತಾ ಪಟ್ಟಿ ಪ್ರಕಟ

**ಬೆಂಗಳೂರು, ಜೂನ್ 1 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕ ಆಯೋಗವು ರಾಜ್ಯಾದ್ಯಂತ ನಡೆಸಿದ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಕಿರಿಯ ಸಹಾಯಕರ/ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಜೇಷ್ಠತೆಯನುಸಾರ ಹಾಗೂ ಅವರ ಮೀಸಲಾತಿಗಳಿಗೆ ಅನುಗುಣವಾಗಿ 1:2 ರ ಅನುಪಾತದಲ್ಲಿ ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯುಳ್ಳ ಅರ್ಹತಾ ಪಟ್ಟಿಯನ್ನು ಆಯೋಗದ ಅಂತರ್ಜಾಲ http://kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಅರ್ಹ ಅಭ್ಯರ್ಥಿಗಳಿಗೆ ನಡೆಸುವ ಮೂಲ ದಾಖಲೆಗಳ ಪರಿಶೀಲನಾ ದಿನಾಂಕವನ್ನು ನಂತರದಲ್ಲಿ ಪ್ರಕಟಿಸಲಾಗುವುದು.

**ಬಾಬು::ಜಿಪಿಆರ್**

# ಕೈಲಾಸ ಮಾನಸ ಸರೋವರ ಯಾತ್ರಿಕರಿಗೆ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಜೂನ್ 1 (ಕರ್ನಾಟಕ ವಾರ್ತೆ)**

2016–17 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಪ್ರಥಮ ಬಾರಿಗೆ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಂಡ ಯಾತ್ರಿಕರಿಗೆ ಸರ್ಕಾರ ಪ್ರೋತ್ಸಾಹ ಧನ ನೀಡಲು ಉದ್ದೇಶಿಸಲಾಗಿದೆ. ಕರ್ನಾಟಕ ರಾಜ್ಯದ ಖಾಯಂ ನಿವಾಸಿಗಳು ನೀಡಿರುವ ಮಾರ್ಗಸೂಚಿಗಳ ಷರತ್ತುಗಳಿಗೆ ಒಳಪಟ್ಟವರು ಮಾತ್ರ ಧನಸಹಾಯ ಪಡೆಯಲು ಅರ್ಹರಾಗಿರುತ್ತಾರೆ. ಈ ಉದ್ದೇಶಕ್ಕಾಗಿ ಪಾಸ್‌ಪೋರ್ಟ್‌ನಲ್ಲಿ ನಮೂದಿಸಲಾಗಿರುವ ಕರ್ನಾಟಕ ರಾಜ್ಯದ ವಿಳಾಸವನ್ನು ಪರಿಗಣಿಸಲಾಗುವುದು. ಈಗಾಗಲೇ ಮಾನಸ ಸರೋವರ ಯಾತ್ರೆ ಕೈಗೊಂಡು ಸರ್ಕಾರದಿಂದ ಧನಸಹಾಯ ಪಡೆದ ಯಾತ್ರಿಕರು, ಇದೇ ಉದ್ದೇಶಕ್ಕಾಗಿ ಎರಡನೇ ಬಾರಿಗೆ ಈ ಧನಸಹಾಯ ಪಡೆಯಲು ಅರ್ಹರಾಗುವುದಿಲ್ಲ. ಸರ್ಕಾರದ ಮಾರ್ಗಸೂಚಿಗಳಿಗೆ ಒಳಪಟ್ಟು ಧನಸಹಾಯ ಪಡೆಯಲು ಇಚ್ಚಿಸುವ ಯಾತ್ರಿಕರು ತಾವು ಯಾತ್ರೆ ಮುಗಿಸಿದ್ದಕ್ಕೆ ಪಡೆಯುವ ಪ್ರಮಾಣ ಪತ್ರದ ದಿನಾಂಕದಿಂದ ನಾಲ್ಕು ತಿಂಗಳ ಒಳಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಈ ಕಚೇರಿಯಲ್ಲಿ ಖುದ್ದು ಪಡೆದು ಈ ಕೆಳಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು. ನಿಗದಿತ ಅವಧಿ ಮೀರಿ ಸಲ್ಲಿಸಿದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, 4ನೇ ಮಹಡಿ, ಶ್ರೀ ಮಿಂಟೋ ಶ್ರೀ ಆಂಜನೇಯ ವಾರ್ತಾ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು –18, ದೂರವಾಣಿ 080–26709689. Email:endowmentcommissioner@gmail.com.

**ಬಾಬು::ಜಿಪಿಆರ್**

# Financial Assistance for Kailasa Manasa Sarovara Yatra

Bengaluru, June 1st 2016 (Karnataka Information)

Government has proposed to give financial assistance to the pilgrims from the State, who visit Kailasa Manasa Sarovara for the first time, for the year 2016-17. The permanent residents of Karnataka and those who comply the terms and conditions mentioned in the Government Order are eligible to get the benefit of this scheme. The address mentioned in the Passport will be taken as prof for Considering the Pilgrim the resident of the State of Karnataka. Those who have already availed the benefit of this scheme are not entitled for the second time. The Pilgrims who wish to avail the benefit of this scheme should fill in the proforma applications and submit it to the address given below, within four months from the date of the certificate of completion of the pilgrimage. Application submitted after the stipulated date will not be considered.

For further information on the subjects, contact Commissioner, Hindu Religious Institutions and Charitable Endowments, 4th Floor, Minto Sree Anjaneya Vartha Bhavan, Alur Venkartarao Road, Chamarajpet, Bengaluru – 560 018. Phone 080 – 26709689 Email. endowment commissioner@gmail.com.

babu:gpr.

# ಬೇಕರಿ ತರಬೇತಿ

**ಬೆಂಗಳೂರು, ಜೂನ್ 1 (ಕರ್ನಾಟಕ ವಾರ್ತೆ)**

ಬೇಕರಿ ತರಬೇತಿ ಘಟಕದ ವತಿಯಿಂದ 4 ವಾರಗಳ ಬೇಕರಿ ತರಬೇತಿ ಕಾರ್ಯಕ್ರಮವನ್ನು ಆಸಕ್ತಿಯುಳ್ಳ ಬೇಕರಿದಾರರಿಗೆ ಉದ್ದಿಮೆ ಮತ್ತು ಗೃಹಿಣಿಯರಿಗಾಗಿ ಆಯೋಜಿಸಲಾಗಿದೆ. ತರಬೇತಿಯು ಜೂನ್ 6 ರಿಂದ ಪ್ರಾರಂಭವಾಗಲಿದೆ.

ಈ ತರಬೇತಿಯಲ್ಲಿ ಬ್ರೆಡ್, ಬನ್, ಪಪ್ಸ್, ಕೇಕ್‌ಗಳು, ವಿಶೇಷ ಬಿಸ್ಕತ್ತುಗಳು, ರೋಲ್ಸ್‌ಗಳು ಮತ್ತಿತರ ಆಕರ್ಷಕ ಬೇಕರಿ ಪದಾರ್ಥಗಳನ್ನು ಕಲಿಸಲಾಗುವುದು. ಅಭ್ಯರ್ಥಿಗಳು ಸ್ವತ: ಪದಾರ್ಥ ತಯಾರಿಸುವ ಮೂಲಕ ಕಲಿಯುವ ಸೌಲಭ್ಯವಿದೆ. ಯಾವುದೇ ವಿದ್ಯಾರ್ಹತೆ ಅವಶ್ಯಕತೆಯಿಲ್ಲ. ತಯಾರಿಕೆಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ತರಬೇತಿ ಘಟಕದಲ್ಲೇ ಒದಗಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು– 560 024, ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 23513370 ಮೂಲಕ ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

**ಬಾಬು::ಜಿಪಿಆರ್**

# BAKING COURSE

Bengaluru, June 1st 2016 (Karnataka Information)

The Bakery Training Unit, Hebbal, Bengaluru is conducting 4 weeks training course on Bakery Technology for the benefit of Housewives and Enterpreneurs from 6th June 2016.

Bakery products like special Biscuits, Bread Rolls, Puffs, Cakes and fancy items will be taught during the course. Participants will be allowed to learn by preparing the products by themselves. The interested persons can contact Co-ordinator in person or through telephone no. 23513370 during office hours.

babu:gpr.

## ರಾಜ್ಯದಲ್ಲಿ 4.000 ಅಂಗನವಾಡಿ ಕಟ್ಟಡಗಳ ನಿರ್ಮಾಣ-ಸಚಿವೆ ಉಮಾಶ್ರೀ

**ಬೆಂಗಳೂರು, ಜೂನ್ 1 (ಕರ್ನಾಟಕ ವಾರ್ತೆ)**

ಬೆಂಗಳೂರು. ಜೂನ್01, 2016-17ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು 4.000 ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗುವುದು. 1.000 ಕಟ್ಟಡಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 3.000 ಕಟ್ಟಡಗಳನ್ನು ಕೇಂದ್ರದ ನೆರವಿನಿಂದ ನಿರ್ಮಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಉಮಾಶ್ರೀ ಹೇಳಿದ್ದಾರೆ.

ಅವರು ಇಂದು ವಿಕಾಸಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಲಾಖೆಯ ಉಪನಿರ್ದೇಶಕರು ಹಾಗೂ ಸಿಡಿಪಿಓ ಗಳ ಒಂದು ದಿನದ ಕಾರ್ಯಾಗಾರವನ್ನು ಉದ್ದೇಶಿಸಿ, ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ಶಾಸಕರ ಉಪಯೋಗಕ್ಕಾಗಿ ಹೊರತಂದಿರುವ ಇಲಾಖೆಯ ವಿವಿಧ ಯೋಜನೆಗಳನ್ನು ಒಳಗೊಂಡ ಕೈಪಿಡಿಯನ್ನು ಹಾಗೂ ಇಲಾಖೆಯ 03 ವರ್ಷಗಳ ಸಾಧನೆಯ ಹೊತ್ತಿಗೆಯನ್ನು ಬಿಡುಗಡೆ ಮಾಡಿದರು.

ರಾಜ್ಯದಲ್ಲಿ 3.000 ಅಂಗನವಾಡಿ ಕಟ್ಟಡಗಳನ್ನು ತಲಾ 8.00 ಲಕ್ಷ ವೆಚ್ಚದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಇದರಲ್ಲಿ ನರೇಗಾ ವತಿಯಿಂದ 5.00 ಲಕ್ಷ ಕೇಂದ್ರ ಸರ್ಕಾರದ ಐ.ಸಿ.ಡಿ.ಎಸ್ ಯೋಜನೆಯಡಿ 2.00 ಲಕ್ಷ ಹಾಗೂ ರಾಜ್ಯ ಸರ್ಕಾರದ ವತಿಯಿಂದ 1.00 ಲಕ್ಷ ಆರ್ಥಿಕ ನೆರವಿನಡಿ ಈ ಅಂಗನವಾಡಿ ಕೇಂದ್ರಗಳನ್ನು ನಿರ್ಮಿಸಲಾಗುವುದು

ಇದನ್ನು ಹೊರತುಪಡಿಸಿ ಇನ್ನೂ 1.000 ಅಂಗನವಾಡಿ ಕೇಂದ್ರಗಳನ್ನು ಇಲಾಖಾ ವತಿಯಿಂದ ನಿರ್ಮಿಸಲಾಗುತ್ತದೆ ಎಂದು ಅವರು ತಿಳಿಸಿದರು.

**ಚಿಕಿತ್ಸಾ ಆಹಾರ ವೆಚ್ಚ ಹೆಚ್ಚಳ:–**ಅಪೌಷ್ಠಿಕ ಮಕ್ಕಳಿಗೆ ಪ್ರಸ್ತುತ ನೀಡುತ್ತಿರುವ ಚಿಕಿತ್ಸಾ ಆಹಾರ ವೆಚ್ಚವನ್ನು 750 ರೂಗಳಿಂದ 2.000 ರೂಗಳಿಗೆ ಹೆಚ್ಚಿಸಲಾಗಿದೆ ಎಂದು ಅವರು ಹೇಳಿದರು. ಅಂಗನವಾಡಿ ಕೇಂದ್ರಗಳಲ್ಲಿ ಇದುವರೆಗೂ ವಾರಕ್ಕೆ ಮೂರು ದಿನ ಕೆನೆ ರಹಿತ ಹಾಲನ್ನು ನೀಡಲಾಗುತ್ತಿದ್ದು, ಇನ್ನು ಮುಂದೆ ವಾರಕ್ಕೆ 03 ದಿನ ಕೆನೆ ಸಹಿತ ಹಾಲನ್ನು ನೀಡಲಾಗುವುದು ಎಂದು ಸಚಿವೆ ಉಮಾಶ್ರೀ ತಿಳಿಸಿದರು.

ಬಾಬು::ಜಿಪಿಆರ್

# ನಾಳೆಯ ಪರೀಕ್ಷೆ ಮುಂದೂಡಿಕೆ

**ಬೆಂಗಳೂರು, ಜೂನ್ 1 (ಕರ್ನಾಟಕ ವಾರ್ತೆ)** :

ಪ್ರಥಮ, ದ್ವಿತೀಯ, ಡಿ.ಇಡಿ, ಡಿ.ಪಿ.ಇಡಿ ಮತ್ತ ಪಿಪಿಟಿ ಪರೀಕ್ಷೆಗಳನ್ನು ದಿನಾಂಕ 02–06–2016 ರಂದು ನಡೆಯಲಿರುವ ಪರೀಕ್ಷೆಯನ್ನು ಜೂನ್ 8 ಕ್ಕೆ ಮುಂದೂಡಲಾಗಿದೆ. ಉಳಿದೆಲ್ಲಾ ದಿನಗಳ ಪರೀಕ್ಷೆಗಳು ಈಗಾಗಲೇ ಪ್ರಕಟಿತವಾಗಿರುವ ಪರೀಕ್ಷಾ ವೇಳಾಪಟ್ಟಿಯಂತೆ ನಡೆಸಲಾಗುತ್ತದೆ. ರಾಜ್ಯದ ಎಲ್ಲಾ ಡಿ.ಇಡಿ, ಡಿ.ಪಿ.ಇಡಿ ಮತ್ತು ಪಿಪಿಟಿ ಸಂಸ್ಥೆಗಳ ಮುಖ್ಯಸ್ಥರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರ ಗಮನಕ್ಕೆ ತರಲು ನಿರ್ದೇಶಕರು (ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್

## ಜಿಲ್ಲಾ ಕಚೇರಿಗಳು ಸದೃಢಗೊಳ್ಳಬೇಕು

**ಬೆಂಗಳೂರು, ಜೂನ್ 1 (ಕರ್ನಾಟಕ ವಾರ್ತೆ)** :

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಸಮರ್ಥವಾಗಿ ಕಾರ್ಯ ನಿರ್ವಹಿಸಬೇಕಾದರೆ ಮೊದಲು ಜಿಲ್ಲಾ ಮಟ್ಟದ ಕಚೇರಿಗಳು ಸದೃಢಗೊಳ್ಳಬೇಕು ಎಂದು ಇಲಾಖೆಯ ಬೆಂಗಳೂರು ನಗರ ಜಿಲ್ಲಾ ಉಪ ನಿರ್ದೇಶಕರಾಗಿ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದ ಪುಟ್ಟರಾಜು ಅವರು ಸಲಹೆ ಮಾಡಿದರು.**

ಇಲಾಖೆಯ ನೌಕರರ ಸಾಲ ಸಹಕಾರ ಸಂಘ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಕೃತಜ್ಞತೆ ಸಲ್ಲಿಸಿ ಅವರು ಮಾತನಾಡುತ್ತಿದ್ದರು.

ಇಲಾಖೆಗೆ ಆಸೆಯಿಂದ ಬಂದೆ. ಆದರೆ, ಆತಂಕದಲ್ಲೇ ಬದುಕಿದೆ. ತಾವು ಸೇವೆ ಪ್ರಾರಂಭಿಸಿದ ಮೊದಲ ದಿನಗಳಲ್ಲಿ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ ಇರಲಿಲ್ಲ. ಆದರೆ, ಮೂಲಭೂತ ಸೌಲಭ್ಯಗಳ ಕೊರತೆ ಇತ್ತು. ಇದೀಗ ಮೂಲಭೂತ ಸೌಲಭ್ಯಗಳ ಕೊರತೆ ಇಲ್ಲ. ಆದರೆ, ಸಿಬ್ಬಂದಿಯ ಕೊರತೆ ಇದೆ. ಈ ಪರಿಸ್ಥಿತಿ ಸುಧಾರಣೆಯಾದಾಗ ಮಾತ್ರ ಇಲಾಖೆಯಲ್ಲಿ ಬೆಳೆಯಲು ಹಾಗೂ ಬೆಳಗಲು ಸಾಧ್ಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್ ಅವರು ಇಷ್ಟಪಟ್ಟ ಇಲಾಖೆಗೆ ಕಷ್ಟಪಟ್ಟು ಬಂದ ಪುಟ್ಟರಾಜು ಅವರ ಹೋರಾಟದ ಬದುಕನ್ನು ಸ್ಮರಿಸಿದರು.

ಜಂಟಿ ನಿರ್ದೇಶಕ ಎಂ. ರವಿ ಕುಮಾರ್, ಉಪ ನಿರ್ದೇಶಕರಾದ ಪಿ. ಎನ್. ಗುರುಮೂರ್ತಿ, ಎ. ಆರ್. ಪ್ರಕಾಶ್, ಎಸ್. ವಿ. ಲಕ್ಷ್ಮೀನಾರಾಯಣ, ಬಸವರಾಜ ಎಂ ಕಂಬಿ, ಡಿ. ಪಿ. ಮುರಳೀಧರ್ ಹಾಗೂ ದೇವರಾಜಯ್ಯ ಅವರೂ ಸೇರಿದಂತೆ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಸಮಾರಂಭಕ್ಕೆ ಸಾಕ್ಷಿಯಾಗಿದ್ದರು.

ಡಿಪಿಎಂ